ದಿನಾಂಕಃ **10.06.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಹೆಚ್.ಎನ್. ವಕೀಲರಿಂದಃ</u>

ನನ್ನ ಮಾವನ ಹೆಸರು ಮುದ್ದಣ್ಣ. ಮುದ್ದಣ್ಣನ ಹೆಂಡತಿ ಹೆಸರು ಗಂಗಮ್ಮ. ಗಂಗಮ್ಮ ತೀರಿಕೊಂಡು 6-7 ವರ್ಷಗಳಾಗಿರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿಸಿರುವಂತೆ 2013 ರಲ್ಲಿ ಆಗಿರುವ ವಿಭಾಗದಂತೆ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ದಾವಾ ಸ್ವತ್ತುಗಳ ಖಾತೆ ನನ್ನ ಮತ್ತು ವಾದಿಯ ಹೆಸರಿನಲ್ಲಿ ಜಂಟಿಯಾಗಿ ಇರುತ್ತವೆ ಎಂದರೆ ಸರಿ. 2019 ರಲ್ಲಿ ಪೌವತಿ ವಾರಸು ಮೇರೆಗೆ ನಿಮ್ಮ ಮತ್ತು ವಾದಿಯ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ವಾದಿಯೇ ಮಾಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳಲ್ಲಿ ಎರಡು ಭಾಗ ಮಾಡಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲವೇ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನ್ನ ಭಾಗ ನನಗೆ ಬಂದರೆ ಸಾಕು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಮರಗಳಲ್ಲೂ ಸಹ ನನಗೆ ಭಾಗ ಬರಬೇಕು ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಮುಲುವು ಕೆ

ಓ. ಹೇ. ಕೇ. ಸರಿ. ಇದೆ.

10/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ